ಅ) ಇಲ್ಲ

ಆ) ಆದರೆ ಈ ತಾಲ್ಲೂಕುಗಳಲ್ಲಿ, ಕೈಗಾರಿಕಾ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳು ಕಡಿಮೆ ಇರುವುದರಿಂದ, ಈ ಯೋಜನೆಯಡಿ, ತಾಲ್ಲೂಕಿನಲ್ಲಿರುವ ವಿದ್ಯಾವಂತ ನಿರುದ್ಯೋಗಿಗಳು ಹೊರ ಜಿಲ್ಲೆಗಳ ಕೈಗಾರಿಕೆಗಳಲ್ಲಿ ತರಬೇತಿಗೆ ತಯಾರಿದ್ದಲ್ಲಿ ಅವಕಾಶ ಕಲ್ಪಿಸಲಾಗುವುದು

853(507) ಶ್ರೀ ವಿ ನೋಮಣ್ಣ (ಬಿನ್ನಿಪೇಟೆ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 2006–07ನೇ ಸಾಲಿನಲ್ಲಿ ಸರ್ಕಾರಿ ಸ್ವಾಮ್ಯದ ಯಾವ ಯಾವ ಕೈಗಾರಿಕೆಗಳು ಹಾಗೂ ಇಲಾಖೆಯ ವ್ಯಾಪ್ತಿಯಲ್ಲಿರುವ ನಿಗಮ ಮಂಡಳಿಗಳು ನಷ್ಟವನ್ನು ಅನುಭವಿಸಿವೆ,

ಆ) ಈ ಕೈಗಾರಿಕೆಗಳ ನಿಗಮಗಳ/ಮಂಡಳಿಗಳ ಒಟ್ಟು ನಷ್ಟದ ಪ್ರಮಾಣವೆಷ್ಟು,

ಇ) ಈವರೆಗೆ ಯಾವ ಯಾವ ಕೈಗಾರಿಕೆಗಳನ್ನು ನಷ್ಟದ ಕಾರಣದಿಂದ ಮುಚ್ಚಲಾಗಿದೆ,

ಈ) ಯಾವ ಯಾವ ಕೈಗಾರಿಕೆಗಳು ಲಾಭದಲ್ಲಿವೆ ಹಾಗೂ ಲಾಭದ ಪ್ರಮಾಣವೆಷ್ಟು,

ಉ) ಮುಚ್ಚಿರುವ ಕೈಗಾರಿಕೆಗಳಲ್ಲಿ ಯಾವ ಯಾವ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ನಿರ್ಧರಿಸಿದೆ, ಇದಕ್ಕೆ ಭರಿಸುವ ವೆಚ್ಚವೆಷ್ಟು,

ಊ) 2007–08ನೇ ಸಾಲಿನಲ್ಲಿ ಹೊಸದಾಗಿ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳನ್ನು ಎಲ್ಲೆಲ್ಲಿ ಸ್ಥಾಪಿಸಲಾಗಿದೆ ಹಾಗೂ ಈ ರೀತಿ ಪ್ರಾರಂಭಿಸಲು ಸರ್ಕಾರದ ಉದ್ದೇಶವೇನು?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) 2006–07ನೇ ಸಾಲಿನ ಲೆಕ್ಕಪತ್ರಗಳ ಆಡಿಟ್ ನಡೆಯುತ್ತಿರುವುದರಿಂದ, ಈ ಮಾಹಿತಿಯನ್ನು ಈಗಲೇ ನೀಡಲು ಸಾಧ್ಯವಾಗುವುದಿಲ್ಲ

ಆ)

	(ರೂ ಲಕ್ಷಗಳಲ್ಲಿ)
ಕವಿಕಾ ನಿ, ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ & ಅಭಿವೃದ್ಧಿ ನಿಗಮ ನಿಯಮಿತ	–2072 47
	–574 64

ಮೈಸೂರು ಕಾಗದ ಕಾರ್ಖಾನೆ

ನಿ –5404 50

ಇ) 1 ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತ
2 ಎನ್‌ಜಿಇಎಫ್, ಬೆಂಗಳೂರು
3 ಮೈಸೂರು ಕ್ರೋಂ ಟ್ಯಾನಿಂಗ್ ಕಂ ನಿಯಮಿತ

ಈ) 2005–06ನೇ ಸಾಲಿನಲ್ಲಿ–

	(ರೂ ಲಕ್ಷಗಳಲ್ಲಿ)
1 ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ನಿ	423 73
2 ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿ	76 72
3 ಕರ್ನಾಟಕ ಸಾಬೂನು & ಮಾರ್ಜಕ	255 72
4 ಎನ್‌ಜಿಇಎಫ್ (ಹುಬ್ಬಳ್ಳಿ) ನಿ	54 80

ಉ) ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಷೇರು ಬಂಡವಾಳದ ಶೇ 51ರಷ್ಟು ಭಾಗವನ್ನು ಓರ್ವ ಆಯಕಟ್ಟಿನ ಪಾಲುದಾರರಿಗೆ ನೀಡಿ, ಎನ್‌ಜಿಇಎಫ್‌ನ ಮೋಟಾರ್ಸ್ ಹಾಗೂ ಟ್ರಾನ್ಸ್‌ಫಾರ್ಮರ್ ವಿಭಾಗಗಳನ್ನು ಪುನಃಶ್ಚೇತನಗೊಳಿಸುವ ಬಗ್ಗೆ ಸರ್ಕಾರವು ಉದ್ದೇಶಿಸಿದೆ ಇದಕ್ಕಾಗಿ ಸರ್ಕಾರದಿಂದ ಯಾವುದೇ ವೆಚ್ಚ ಮಾಡುವ ಅವಶ್ಯಕತೆಯಿರುವುದಿಲ್ಲ

ಊ) ಯಾವುದೂ ಇಲ್ಲ
ಉದ್ಭವಿಸುವುದಿಲ್ಲ

854(508) ಶ್ರೀ ಸೋಮಣ್ಣ ವಿ (ಬಿನ್ನಿಪೇಟೆ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬನ್ನೇರುಘಟ್ಟದ ಬಳಿ ವಿಜ್ಞಾನ ನಗರವನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದರೆ, ಈ ಹಿಂದೆ ಬನ್ನೇರುಘಟ್ಟದ ಬಳಿ ವಿಜ್ಞಾನ ನಗರವನ್ನು ಸ್ಥಾಪಿಸಲು ಸರ್ಕಾರ ನಿರ್ಧಾರ ಕೈಗೊಂಡು ಅದನ್ನು ಕೈಬಿಟ್ಟು ಹೆಸರುಘಟ್ಟದ ಬಳಿ ಸ್ಥಾಪಿಸಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದು ನಿಜವೇ?

ಇ) ಬನ್ನೇರುಘಟ್ಟದ ಉದ್ದೇಶಿತ ಸ್ಥಳ ಅರಣ್ಯ ಸಂರಕ್ಷಿತ ಪ್ರದೇಶವಾಗಿದ್ದು, ವಿಜ್ಞಾನ ನಗರ ನಿರ್ಮಿಸುವುದರಿಂದ ಪರಿಸರ ಹಾಗೂ ಪ್ರಾಣಿಗಳಿಗೆ ತೊಂದರೆಯಾಗುವುದಿಲ್ಲವೇ?

ಈ) ಇದಕ್ಕಾಗಿ 2007–08ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಹಣವೆಷ್ಟು ?

ಶ್ರೀ ರಾಮಚಂದ್ರ ಗೌಡ (ಯೋಜನೆ, ಸಣ್ಣ ಉಳಿತಾಯ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)